

ಮುಂಡೇಶ್ವರಿ ದೇವಾಲಯದ ಆವರಣದಲ್ಲಿ ನಂದಿ

ಮತ್ತು ಆ ಕುರಿಯ ಪ್ರಾಣಕ್ಕೆ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳಲಾಗುತ್ತದೆ! ಹಾಗಿದ್ದರೆ, ಈ ರಕ್ತವಿಹೀನ ಬಲಿ ಹೇಗೆ ಸಾಧ್ಯ?

ಮನೋಭಿಲಾಷೆಯು ಈಡೇರಿದರೆ ಈ ಆದಿಶಕ್ತಿ ದೇವಿಗೆ ಕುರಿಯನ್ನು ಬಲಿ ನೀಡುವುದಾಗಿ ಶ್ರದ್ಧಾಳುಗಳು ಹರಕೆಯನ್ನು ಹೊರುತ್ತಾರೆ. ಒಂದು ವೇಳೆ ಅವರ ಮನೋಬಯಕೆ ಈಡೇರಿದರೆ ಒಂದು ಕುರಿಯನ್ನು ದೇವಾಲಯಕ್ಕೆ ತೆಗೆದುಕೊಂಡು ಬಂದು, ಪೂಜಾರಿಗೆ ನೀಡುತ್ತಾರೆ. ಮೊದಲಿಗೆ ಕುರಿಗೆ ಸ್ನಾನವನ್ನು ಮಾಡಿಸಲಾಗುತ್ತದೆ. ನಂತರ ಅದನ್ನು ದೇವಿಯ ವಿಗ್ರಹದ ಮುಂದೆ ನಿಲ್ಲಿಸಲಾಗುತ್ತದೆ. ಅದಕ್ಕೆ ಪೂಜೆಯನ್ನೂ ಮಾಡಲಾಗುತ್ತದೆ. ನಂತರ ಆ ಕುರಿಯನ್ನು ಪೂಜಾರಿಯು ದೇವಿಯ ಪಾದಗಳ ಬಳಿಯಲ್ಲಿ ನಿಲ್ಲಿಸುತ್ತಾನೆ. ಇದಾದ ನಂತರ ಅಕ್ಷತೆ ಕಾಳುಗಳನ್ನು ಪೂಜಾರಿಯು ಆದಿಶಕ್ತಿ ದೇವಿಯ ಪಾದಗಳ ಬಳಿಯಲ್ಲಿ ಇಟ್ಟು ಕೈಮುಗಿಯುತ್ತಾನೆ. ಕೆಲವು ಮಂತ್ರಗಳನ್ನು ಉಚ್ಚರಿಸುತ್ತಾನೆ. ಅದಾದ ನಂತರ ಆ ಅಕ್ಷತೆ ಕಾಳುಗಳನ್ನು ಆ ಕುರಿಯ ಮೈಮೇಲೆ ಹಾಕುತ್ತಾನೆ. ಆಗ ಆ ಕುರಿಯು ಆಶ್ಚರ್ಯಕರ ರೀತಿಯಲ್ಲಿ ದೇವಿಯ ಪಾದದ ಮೇಲೆ ಪ್ರಜ್ಞೆ ತಪ್ಪಿ ಬಿದ್ದುಬಿಡುತ್ತದೆ! ಕೂಡಲೇ ಪೂಜಾರಿಯು ಇನ್ನೊಂದಿಷ್ಟು ಅಕ್ಷತೆಯ ಕಾಳುಗಳನ್ನು ದೇವಿಯ ಪಾದದ ಮೇಲಿಟ್ಟು ಮಂತ್ರಗಳನ್ನು ಹೇಳುತ್ತಾ ಕೈ ಮುಗಿಯುತ್ತಾನೆ ಮತ್ತು ಅವನ್ನು ಕುರಿಯ ಮೇಲೆ ಹಾಕುತ್ತಾನೆ. ಆಗ ಆ ಕುರಿಯು ಇನ್ನೊಮ್ಮೆ ಆಶ್ಚರ್ಯಕರ ರೀತಿಯಲ್ಲಿ ಪ್ರಜ್ಞೆ ಬಂದು ನಿಧಾನವಾಗಿ ಎದ್ದು ನಿಲ್ಲುತ್ತದೆ! ಅಲ್ಲಿರುವ ಭಕ್ತರು ದೇವಿಗೆ ಜಯಕಾರ ಹಾಕುತ್ತಾರೆ. ನಂತರ ಪೂಜಾರಿಯು ಆ ಕುರಿಯನ್ನು ಅದನ್ನು ಅರ್ಪಿಸಿದವರಿಗೇ ಹಿಂದಿರುಗಿಸುತ್ತಾನೆ. ಅಲ್ಲಿಗೆ ದೇವಿಗೆ ಬಲಿ ನೀಡುವ ಕಾರ್ಯ ಮುಕ್ತಾಯವಾಗುತ್ತದೆ.

ಒಂದು ಹನಿ ರಕ್ತವನ್ನೂ ಹರಿಸದೇ ನಡೆಸುವ ಈ ಬಲಿ ಕಾರ್ಯ ಆಶ್ಚರ್ಯ ಹುಟ್ಟಿಸುತ್ತದೆ. ಭಕ್ತರ ಪಾಲಿಗಿದು ಪವಾಡ. ಮಂದಿರ ಪೂಜಾರಿ ಮಾತ್ರ, 'ಇದೇನೂ ಪವಾಡವಲ್ಲ. ಒಮ್ಮೆ ಅಕ್ಷತೆ ಹಾಕಿದಾಗ ಕುರಿಯು ಪ್ರಜ್ಞೆಯನ್ನು ಕಳೆದುಕೊಳ್ಳುವುದು ಮತ್ತು ಇನ್ನೊಮ್ಮೆ ಹಾಕಿದಾಗ ಪ್ರಜ್ಞೆಗೆ ಮರಳುವುದು ದೇವಿಯ ಮಹಿಮೆ' ಈ ರಕ್ತವಿಹೀನ ಬಲಿ ಪರಂಪರೆಗೆ ನೂರಾರು ವರ್ಷಗಳ ಇತಿಹಾಸವಿದೆ ಎನ್ನುವುದು ಅವರ ಅನಿಸಿಕೆ.

## ಅತ್ಯಂತ ಪುರಾತನ ದೇವಾಲಯ

ಸುವರಾ ನದಿಗೆ ಸಮೀಪದಲ್ಲಿರುವ, ಭಾರತದ ಅತ್ಯಂತ ಪುರಾತನ ಹಿಂದೂ ದೇವಾಲಯಗಳಲ್ಲಿ ಒಂದಾಗಿರುವ, ನಾಗರ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿರುವ, ಕಲ್ಲಿನ ಗೋಡೆಗಳನ್ನು ಹೊಂದಿರುವ, ಮುಂಡೇಶ್ವರಿ ದೇವಾಲಯದಲ್ಲಿ ಕ್ರಿ.ಶ. 625ನೇ ಇಸವಿಯ ಶಾಸನವೊಂದು ದೊರಕಿದೆ.

ಬಿಹಾರ ರಾಜ್ಯ ಅಭಿವೃದ್ಧಿ ಸಮಿತಿಯ ಉಪನಿರ್ದೇಶಕ ಹಾಗೂ ಪುರಾತತ್ವ ಶಾಸ್ತ್ರಜ್ಞರಾಗಿರುವ ಅನಂತಾಶುತೋಷ ದ್ವಿವೇದಿ ಹೇಳುವ ಪ್ರಕಾರ, 'ಇದು ಗುಪ್ತೋತ್ತರ ಕಾಲದ ದೇವಾಲಯವಾಗಿದ್ದು, ನಾಲ್ಕರಿಂದ ಏಳನೇ ಶತಮಾನದ ನಡುವಿನ ಅವಧಿಯಲ್ಲಿ ರೂಪುಗೊಂಡಿದೆ. ದೇವಾಲಯದ ಗರ್ಭಗುಡಿಯ ಒಂದು ಕಡೆಯಲ್ಲಿ ಶಿವ ಹಾಗೂ ಶಕ್ತಿದೇವಿಯ ಮೂರ್ತಿಗಳಿವೆ. ಇನ್ನೊಂದು ಮೂಲೆಯಲ್ಲಿ ಮುಂಡೇಶ್ವರಿ ದೇವಿಯ ವಿಗ್ರಹವಿದೆ. ಅದರ ಪಕ್ಕದಲ್ಲಿಯೇ ಚತುರ್ಮುಖಿ ಶಿವಲಿಂಗವು ಸ್ಥಾಪಿತವಾಗಿದೆ. ಎಲ್ಲ ವಿಗ್ರಹಗಳೂ 'ಶಬ್ದ ಮಾಡುವ ಕಲ್ಲು'ಗಳಿಂದ ನಿರ್ಮಿತವಾಗಿವೆ. ಕೆಲವು ಕೆತ್ತನೆಗಳು ಗುಪ್ತರ ಕಾಲದ ನಂತರದ್ದಾಗಿವೆ. ಈ ದೇವಾಲಯದಲ್ಲಿರುವ ಸೂರ್ಯನ ಪ್ರತಿಮೆಯು ಅದ್ಭುತವಾಗಿದೆ'.

ದ್ವಿವೇದಿಯವರ ಪ್ರಕಾರ, ಒಂದಾನೊಂದು ಕಾಲದಲ್ಲಿ ಈ ದೇವಾಲಯವು ಗೋಪುರವನ್ನು ಹೊಂದಿತ್ತು. ಆದರೆ ವಿದೇಶೀಯರ, ಮೊಘಲರ ದಾಳಿಗೆ ತುತ್ತಾಗಿ ಗೋಪುರ ನಾಶವಾಗಿದೆ. ಶಿಥಿಲಾವಸ್ಥೆಯಲ್ಲಿರುವ ಈ ದೇವಾಲಯಕ್ಕೆ ಈಗಲೂ ಗೋಪುರವನ್ನು ಹೊಂದಿಸಬಹುದಾಗಿದೆ.

ಶಂಖ ಲಿಪಿಯಲ್ಲಿನ ಕೆಲವು ಬರಹಗಳು ಈ ದೇವಾಲಯದ ಮೆಟ್ಟಿಲುಗಳ ಕೆತ್ತನೆಯಲ್ಲಿ ಕಂಡುಬರುತ್ತದೆ. ಇದೊಂದು ಅಷ್ಟಭುಜಾಕಾರದಲ್ಲಿರುವ ಅತ್ಯಂತ ವಿರಳ ದೇವಾಲಯಗಳಲ್ಲಿ ಒಂದಾಗಿದೆ. ಈ ದೇವಾಲಯದ ಬಗ್ಗೆ ಬ್ರಿಟಿಷ್ ಇತಿಹಾಸಕಾರರಾದ ಕಿಂಗ್‌ಹ್ಯಾಮ್ ತಮ್ಮ ಪ್ರವಾಸಕಥನದಲ್ಲಿ ದಾಖಲಿಸಿದ್ದಾರೆ.

ದೇವಿಯ ಜೊತೆಗೆ ರಕ್ತರಂಜಿತ ದೃಶ್ಯಗಳೇ ವ್ಯಾಪಕವಾಗಿರುವ ಸಂದರ್ಭದಲ್ಲಿ, ಸಾಂಕೇತಿಕವಾದ ಈ ಬಲಿ ಆಚರಣೆ ವಿಶೇಷ ಎನ್ನಿಸುವುದರ ಜೊತೆಗೆ ಅಚ್ಚರಿಯನ್ನೂ ಹುಟ್ಟಿಸುವಂತಿದೆ. ■